# ಶುದ್ಧ ಜೇನುತುಪ್ಪ ಬ್ರಾಂಡ್ ಬಿಡುಗಡೆ

ಬೆಂಗಳೂರು,ಜೂ.27– ಭಾರತದ ಅತಿದೊಡ್ಡ ಜೇನುತುಪ್ಪ ತಯಾರಿಕೆ, ಸಂಸ್ಕರಣೆ ಮತ್ತು ರಫ್ತುದಾರ ಸಂಸ್ಥೆಯಾದ ಎಪಿಐಎಸ್ ಇದೀಗ ಎಪಿಐಎಸ್ ಹಿಮಾಲಯ ಮತ್ತು ಎಪಿಐಎಸ್ ಹಿಮಾಲಯ ಗೋಲ್ಡ್ ಎಂಬ ಎರಡು ಆರೋಗ್ಯಕಾರಿ ಶುದ್ಧ ಜೇನುತುಪ್ಪ ಬ್ರಾಂಡ್‌ಗಳನ್ನು ಭಾರತೀಯ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಈ ಎರಡೂ ಉತ್ಪನ್ನಗಳಲ್ಲಿ ಒಂದು ಖರೀದಿ ಮಾಡಿದರೆ ಮತ್ತೊಂದು ಉಚಿತವಾಗಿ ನೀಡಲಿದೆ. ಈ ಶುದ್ಧ ಜೇನುತುಪ್ಪ 1 ಕೆಜಿ, 500 ಗ್ರಾಂ ಮತ್ತು 225 ಗ್ರಾಂಗಳ ಪ್ಯಾಕ್‌ಗಳಲ್ಲಿ ಲಭ್ಯವಿದೆ. ಭಾರತ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜೇನುತುಪ್ಪ ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆ ಎಂಬ ಹೆಗ್ಗಳಿಕೆಯನ್ನು ಎಪಿಐಎಸ್ ಹೊಂದಿದೆ. ಸಂಸ್ಥೆಯು ತನ್ನ ಅತ್ಯಾಧುನಿಕ ಪ್ರಯೋಗಾಲಯದ ಮೂಲಕ ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ತಕ್ಕಂತೆ ಜೇನುತುಪ್ಪ ತಯಾರಿಸುತ್ತಿದೆ. ಇದೇ ಕೌಶಲ್ಯದೊಂದಿಗೆ ಎಪಿಐಎಸ್ ಹಿಮಾಲಯ ಉತ್ಪನ್ನದಲ್ಲೂ ಈ ಅಂತಾರಾಷ್ಟ್ರೀಯ ಗುಣಮಟ್ಟವನ್ನು ಕಾಯ್ದುಕೊಂಡಿದೆ.